ಮದರಿಯಿಂದ ಬಿಜಾಪುರ ಜಿಲ್ಲೆಯ ಶಿವಣಗಿಗೆ ಬಂತು. ನಾವು ಎಲ್ಲೇ ತಿರುಗಾಡಿದ್ರುನು ಸಹಿತ ನೆಲೆ ನಿಂತ ಊರು ಅಂತ ಒಂದಿರ್ತದ. ನನಗೆ ತಿಳಿವಳಿಕೆ ಬರೋ ಹೊತ್ತಿನಾಗ ನಾವು ಶಿವಣಗಿ ಅನ್ನೋ ಊರಲ್ಲಿದ್ವಿ. ಹಂಗಾಗಿ ಅದಾ ನಮ್ಮ ಊರಾಗಿದ್ದರೂ ಅದು ತಾತ್ಕಾಲಿಕವಾಗಿತ್ತು. ಯಾಕಂದ್ರ, ಗೊಂದಲಿಗರು ವರ್ಷದಲ್ಲಿ ಹನ್ನೊಂದು ತಿಂಗಳೂ ಹೊಟ್ಟೆಪಾಡಿಗಾಗಿ ಊರೂರು ಅಲೆದಾಡ್ತಾ ಇರ್ತಾರ. ನಮ್ಮದು ವಿಳಾಸ ಇಲ್ಲದ, ಯಾವ ನೆಲೆ ಇಲ್ಲದ, ಬಯಲಲ್ಲಿ ಬದುಕಿದ ಜನಸಮುದಾಯ. ಹಿಂಗೆ ಊರು ಬಿಟ್ಟು ಹೊರಗೆ ಹೋಗೋದಕ್ಕೆ 'ಮುಸಾಫರ'ಕ್ಕೆ ಹೋಗೋದು ಅನ್ತಾರೆ. ಈಗಲೂ ಬಹಳಷ್ಟು ಕುಟುಂಬಗಳು 'ಮುಸಾಫರ'ಕ್ಕೆ ಹೋಗ್ತಾವೆ. ಆದ್ರೆ 'ಆಷಾಢ ಆಚರಣೆ' ಅಂತ ಒಂದು ತಿಂಗಳು ಮಾತ್ರ ನಮ್ಮ ಬಂಧುಬಳಗ ಎಲ್ಲ ಶಿವಣಗಿಯಲ್ಲಿ ಸೇರ್ತಾ ಇದ್ರು. ನಮ್ಮ ಸಮುದಾಯಕ್ಕೆ ಸೇರಿದ ಎಲ್ಲಾ ಅವರವರ ಊರಲ್ಲಿ ಸೇರಬೇಕು. ಇದು ಕಡ್ಡಾಯ ಪದ್ಧತಿ ಐತಿ. ಮುಸಾಫರಕ್ಕೆ ಹೋದವ್ರು ಏನಾದ್ರು? ಸತ್ತಿದ್ದಾರೋ, ಬದುಕಿದ್ದಾರೋ ಅನ್ನೋದು ಯಾರಿಗೂ ಪೂರ್ತಿ ತಿಳೀತಿರ್ಲಿಲ್ಲ. ಅಲೆದಾಟದಲ್ಲಿ ಯಾರಾದರೂ ಸಿಕ್ಕಿ ಒಬ್ಬರಿಂದ ಮತ್ತೊಬ್ಬರಿಗೆ ಅಷ್ಟಿಷ್ಟು ಗೊತ್ತಾಗ್ತಿತ್ತು ಅಷ್ಟೆ. ಆಷಾಢಕ್ಕೆ ಬಂದಾಗಲೇ ಎಲ್ಲರ ಎಲ್ಲ ಸಂಗತಿಗಳೂ ತಿಳೀತಾ ಇದ್ದದ್ದು. ನಮ್ಮ ಜಾತಿಯೊಳಗೆ ಅನೇಕ 'ಬೆಡಗು'ಗಳಿದ್ದಾವ. 'ಬೆಡಗು' ಅಂದ್ರ... ಜಾತಿ ಒಳಗೇನೆ ಇರೋ ಒಂದು ಉಪ ಪಂಗಡ ಅನ್ನಬಹುದು. ಈ 'ಬೆಡಗು'ಗಳೇನೇ ಆಯಾಯ ಮನೆತನಕ್ಕೆ ಅಡ್ಡ ಹೆಸರಾಗಿರ್ತದ.

ನನ್ನ ಚಿಕ್ಕಪ್ಪ ಹಕ್ಕಿಶಕುನ ಹೇಳ್ತಾ ಇದ್ದ. ಹಕ್ಕಿಶಕುನ ಹೇಳಾವ್ರನ್ನ ಬುಡಬುಡಕೇರು, ಕನೇಕಾರ ಅಂತಲೂ ಕರೀತಾರ. ಚಿಕ್ಕಪ್ಪ ಬುಡಬುಡುಕಿನ ಬಹಳ ಕಲಾತ್ಮಕವಾಗಿ ಬಾರಿಸ್ತಿದ್ದ. ನಿಮಗೂ ಗೊತ್ತಿರ್ತದ, ಬುಡಬುಡಕೆಯವರು ಭವಿಷ್ಯ ನುಡೀತ ಊರೂರೂ ಅಲೀತಾರ. ಹಿಂಗ ಜೋತಿಷ ಹೇಳಾದ್ರಿಂದ ಜೋತಿಷಿ ಅನ್ನೋ ಪದನೇ ದೋಯಿಸ, ದೋಸಗೇರ ಅಂತ ಅಪಭ್ರಂಶ ಆಗಿರಬೇಕು. ಗೊಂದಲಿಗೇರ, ಬುಡಬುಡಕೇರ, ದೋಸಗೇರ – ಇವೆಲ್ಲ ಒಂದೇ ಜಾತಿಯ ಬೇರೆ ಬೇರೆ ಪದಗಳು. ಇವು ಅವರು ಮಾಡೋ ಉದ್ಯೋಗನೂ ಸೂಚುಸ್ತಾವ. ಗೊಂದಲ ಹೇಳುವವರು ಗೊಂದಲಿಗರು, ಬುಡಬುಡಕಿ ಶಕುನ ಹೇಳೋವ್ರು ಬುಡಬುಡಕೇರು, ಜೋತಿಷ ಹೇಳುವವರು ದೋಸಗೇರು ಅಂತ. ಒಂದು ಕಾಲದಲ್ಲಿ ಈ ಮೂವರೂ ತಾವು ಮಾಡೋ ಕೆಲಸವನ್ನ ಅದಲಿ ಬದಲಿ ಮಾಡೋ ಹಾಂಗಿರಲಿಲ್ಲ. ಇದು ಹಿರಿಯರು ಮಾಡಿದ ಅಲಿಖಿತ ನಿಯಮ ಆಗಿತ್ತು. ಎಲ್ಲಾ ಬೇರೆಬೇರೆ ಕೆಲಸ ಮಾಡಿ ಬದುಕಲಿ ಅನ್ನೋ ಒಳ್ಳೆ ಉದ್ದೇಶದಿಂದ ಮಾಡಿರೋ ಕಟ್ಟಳೆ ಇದು. ಈಗ ಇದು ಕಟ್ಟುನಿಟ್ಟಾಗಿ ಉಳಿದಿಲ್ಲ.



◆ ನಿಮ್ಮ ತಂದೆ, ತಾಯಿ... ವಿದ್ಯಾಭ್ಯಾಸ?

ನನ್ನ ತಂದೆ ಹೆಸರು ಮಾರುತಿ, ತಾಯಿ ಭಾಗವ್ವ. ನನ್ನಜ್ಜ ಭೀಮಪ್ಪ. ಇವನು ಬಹಳ ಒಳ್ಳೆ ಕಲಾವಿದ ಆಗಿದ್ದ. 'ರಾಧಾ'ನಾಟ ಅಂತ ಸಣ್ಣಾಟದಾಗ ನನ್ನಜ್ಜ ರಾಧಾನ ಪಾತ್ರ ಮಾಡ್ತಿದ್ದ. ಸಂಗ್ಯಾ-ಬಾಳ್ಯಾ, ಪಾರಿಜಾತ, ರಾಧಾನಾಟ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ – ಇವನ್ನೆಲ್ಲ 'ಸಣ್ಣಾಟ' ಅನ್ತಾರ. ಅಜ್ಜನ ಆಟ ನೋಡಿದವ್ರು ಬಹಳ ದಿನಗಳವರೆಗೆ ಅವನ ಪಾತ್ರದ ಬಗ್ಗೆ ಹೇಳ್ತಿದ್ರು. ಅಜ್ಜ ಲಾವಣಿಗಳನ್ನ ಕಟ್ಟಿ ಹಾಡ್ತಾ ಇದ್ದ. ಈ ಅರ್ಥದಲ್ಲಿ ಅವನೊಬ್ಬ ಕವಿ ಅನ್ನಬೋದು. ಅವನು ಅಕ್ಷರ ಕಲಿಯದೆ ಹೋದ್ರೂ ಅದ್ಹೇಗೆ ಲಾವಣಿಗಳನ್ನ ರಚಿಸಿದ ಅನ್ನೋದು ನನಗೆ ಸೋಜಿಗ ಅನ್ನಸ್ತದ. ಅವನು ಕಟ್ಟಿದ್ದ ಒಂದು ಲಾವಣಿಯ ಮೊದಲಿನ ಕೆಲ ಸಾಲುಗಳು:

**'ಆದ ಕತಂತರ ಸಾರಿ ಹೇಳತಿನಿ**
**ಚಿತ್ತವಿಡಿರಿ ಜರಾ**
**ನೋಡಿ ಬಂದೀನಿ ಚಮತ್ಕಾರಾ**
**ಸಿಂದಗಿ ತಾಲೂಕಿನ್ಯಾಗ ಮಡ್ನೊಳ್ಳಿ**
**ಎಂಬುದು ಸಣ್ಣದೈತಿ ನಗರಾ'**

ಇದ್ರ ಮೂಲಕ ಕತಿ ಹೇಳ್ತಾ ಇದ್ದ. ನನ್ನ ತಂದೇನೂ ಲಾವಣಿ ಕಟ್ಟಿ ಹಾಡ್ತಿದ್ರು. ಇದೆಲ್ಲ ಪ್ರಭಾವ ನನ್ನ ಮೇಲೂ ಐತಿ...